ರೂ. 59.84ಲಕ್ಷ ರೂ. 56.88 ಲಕ್ಷ.

ಈ) 1990-91ನೇ ಆರ್ಥಿಕ ವರ್ಷ ಮುಗಿದಿಲ್ಲವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಹೌದು.

ಊ) ಸಾಧಾರಣವಾಗಿ ಈ ಕೆಳಗಿನ ತೊಂದರೆಗಳು ಕಂಡುಬಂದಿದೆ.

1) ಮಂಡಲ್ ಪಂಚಾಯಿತಿ ವತಿಯಿಂದ ಫಲಾನುಭವಿಗಳ ಆಯ್ಕೆಯ ವಿಳಂಬ.

2) ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಕಾಲದಲ್ಲಿ ಸಾಲ ದೊರೆಯದೇ ಇರುವುದು.

3) ಕ್ರಿಯಾ ಯೋಜನೆಯನ್ನು ಅನುಮೋದಿಸುವಲ್ಲಿ ಜಿಲ್ಲಾ ಪರಿಷತ್ತಿನಿಂದ ವಿಳಂಬ.

ಸಂಗೀತದಾರರಿಗೆ, ಕಲಾಕಾರರಿಗೆ, ನಾಟಕಕಾರರಿಗೆ, ಮಾಸಾಶನ ನೀಡುವ ಬಗ್ಗೆ

807 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವ ಕಲ್ಯಾಣ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಂಗೀತದಾರರಿಗೆ, ನಾಟಕಕಾರರಿಗೆ, ಕಲಾವಿದರ ಮಾಸಾಶನ ಮಂಜೂರಾತಿ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು(ಪೂರ್ಣ ವಿವರಗಳನ್ನು ನೀಡುವುದು)*

ಆ) *ಮಾಸಾಶನ ಮಂಜೂರಾತಿಗೆ ವಿಳಂಬವಾಗಲು ಕಾರಣವೇನು?*

ಇ) *ಬಾಕಿ ಇರುವ ಅರ್ಜಿದಾರರಿಗೆ ಮಾಸಾಶನವನ್ನು ಯಾವಾಗ ಮಂಜೂರು ಮಾಡಲಾಗುವುದು?*

ಶ್ರೀ ಎಸ್. ರಮೇಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು)

ಅ) ಸಂಗೀತಗಾರರು 152.

ಆ) ನಾಟಕಕಾರರು 742.

ಒಟ್ಟು 894

ಇ) ರಾಜ್ಯದ ಆರ್ಥಿಕ ಪರಿಸ್ಥಿತಿಯ ಚರ್ಚೆಯಲ್ಲಿ ಪರಿಶೀಲಿಸಲಾಗುವುದು.

ವೀಡಿಯೋ ಕೇಬಲ್‌ಗಳಿಗೆ ಅನುಮತಿ ನೀಡು ಬಗ್ಗೆ

808- ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವ ಕಲ್ಯಾಣ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೇಬಲ್ ವೀಡಿಯೋ ಅಂದರೇನು?*

ಆ) *ಬೆಂಗಳೂರಿನಲ್ಲಿ ಎಷ್ಟು ವೀಡಿಯೋ ಕೇಬಲ್‌ಗಳಿವೆ (ಈ ಬಗ್ಗೆ ಪೂರ್ಣ ವಿವಾಸವನ್ನು ನೀಡುವುದು)*

ಇ) *ಇಂತಹ ಕೇಂದ್ರಗಳನ್ನು ತೆರೆಯಲು ಸರ್ಕಾರದವರು ಅನುಮತಿ ನೀಡಿರುವರೇ ಹಾಗೂ ಅನುಮತಿ ನೀಡುವಾಗ ಅನುಸರಿಸುವ ವಿಧಾನಗಳಾವುವು?*

ಈ) ಅವುಗಳನ್ನು ತಡೆಗಟ್ಟಲು ಸರ್ಕಾದವರು ಕ್ರಮ ಕೈಗೊಳ್ಳುವರೆ, ಹಾಗಿದ್ದಲ್ಲಿ ಅಂತಹ ಕ್ರಮಗಳಾವುವು?

ಶ್ರೀ ಧರ್ಮ ಸಿಂಗ್ (ಗೃಹ ಮಂತ್ರಿಗಳು)